ಇ) ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಶುಶ್ರೂಷಾ ನಿಕಾಯದಿಂದ ಉಪಕುಲಸಚಿವರನ್ನು ನೇಮಕಾತಿ ಮಾಡುವ ಪ್ರಸ್ತಾವನೆ ಇದೆಯೇ?

ಶ್ರೀ ಇಕ್ಬಾಲ್ ಅನ್ಸಾರಿ (ವೈದ್ಯಕೀಯ ಶಿಕ್ಷಣ ಸಚಿವರು):

ಅ) ಇಲ್ಲ.

ಆ) ಇಲ್ಲ.

ಇ) ಹೌದು.

2494(2695) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ):–ಮಾನ್ಯ ಪ್ರಾಥಮಿಕ ಪ್ರೌಢ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಖಾಸಗಿ ಅನುದಾನಿತ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿಯಿರುವ ಶಿಕ್ಷಕರು/ ಉಪನ್ಯಾಸಕರ ಸಂಖ್ಯೆ ಎಷ್ಟು; ಜಿಲ್ಲಾವಾರು ವಿವರವನ್ನು ಪ್ರತ್ಯೇಕವಾಗಿ ಒದಗಿಸುವುದು;

ಆ) ಖಾಲಿಯಿರುವ ಶಿಕ್ಷಕರ ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ನಿರ್ಬಂಧ ವಿಧಿಸಿರುವುದು ನಿಜವೇ;

ಈ) ಹಾಗಿದ್ದರೆ, ಬಹು ಮುಖ್ಯವಾದ ಈ ಘಟ್ಟದಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷಕರಿಲ್ಲದೇ ಆಗುತ್ತಿರುವ ತೊಂದರೆ ನಿವಾರಿಸಲು ಸರ್ಕಾರವು ಕೈಗೊಂಡ ತುರ್ತು ಕ್ರಮಗಳೇನು: (ವಿವರ ಒದಗಿಸುವುದು)?

ಶ್ರೀ ಆರ್. ರಾಮಲಿಂಗರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ)

ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಸಂಖ್ಯೆ	ಪದವಿ ಪೂರ್ವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಸಂಖ್ಯೆ
2102	258

ಜಿಲ್ಲಾವಾರು ವಿವರದ ಪಟ್ಟಿಯನ್ನು ಅನುಬಂಧ–Iರಲ್ಲಿ ಲಗತ್ತಿಸಿದೆ.

ಆ) ಆರ್ಥಿಕ ಇಲಾಖೆಯ, ಮಿತವ್ಯಯಕ್ಕೆ ಸಂಬಂಧಿಸಿದ ದಿನಾಂಕ: 05.07.2004ರ ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ 02 ಬಿಇಎಂ 2003ರ ಪ್ರಕಾರ ಈ ಕೆಳಗೆ ಉದ್ಧರಿಸಿದಂತೆ ನಿಷೇಧವನ್ನು ವಿಧಿಸಲಾಗಿದೆ.

"(h) The ban on recruitment/ creation and filling up of posts also covers all grant-in aid institutions.

ಇ) (i) All the existing vacant posts or those falling vacant under grant-in-aid institutions should remain vacant without exception until further orders". ಅದಕ್ಕೆ ಪೂರ್ವದಲ್ಲಿ ಆರ್ಥಿಕ ಇಲಾಖೆಯ ದಿನಾಂಕ: 17.01.2004ರ ಆದೇಶ ಸಂಖ್ಯೆ: ಎಫ್‌ಡಿ 02 ಟಿಎಫ್‌ಪಿ 2004ರ ಪ್ರಕಾರ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ದಿನಾಂಕ: 31.01.1995ರ ಸುತ್ತೋಲೆ ಸಂಖ್ಯೆ: ಇಡಿ 450 ಎಸ್‌ಇಪಿ 92ರ ಪ್ರಕಾರ ಪ್ರತ್ಯಾಯೋಜಿಸಲಾದ ನೇಮಕಾತಿಗಳನ್ನು ಅನುಮೋದನೆ ಮಾಡುವ ಅಧಿಕಾರವನ್ನು ಸರ್ಕಾರ ಹಿಂತೆಗೆದುಕೊಂಡಿರುತ್ತದೆ. ಆದುದರಿಂದ, ಸದರಿ ಹುದ್ದೆಗಳನ್ನು ತುಂಬಲು ಆಸ್ಪದ ಇಲ್ಲ.

ಈ) ಮೇಲೆ ಉಲ್ಲೇಖಿಸಿದ, ದಿನಾಂಕ: 05.07.2004ರ ಆದೇಶದ ಪ್ರಕಾರ ಸದರಿ ಹುದ್ದೆಗಳನ್ನು ತುಂಬಲು ಆಸ್ಪದ ಇಲ್ಲ.

ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ಖಾಲಿಯಿರುವ ಹುದ್ದೆಗಳ ವಿವರ

	ಜಿಲ್ಲೆಯ ಹೆಸರು	ಒಟ್ಟು ಹುದ್ದೆಗಳು
1.	ಬೆಂಗಳೂರು ಉತ್ತರ	88
2.	ಬೆಂಗಳೂರು ದಕ್ಷಿಣ	84
3.	ಬೆಂಗಳೂರು ಗ್ರಾಂ.	59
4.	ಕೋಲಾರ	20
5.	ಕೋಲಾರ ಉತ್ತರ	13
6.	ತುಮಕೂರು	48
7.	ತುಮಕೂರು ಉತ್ತರ	13
8.	ಶಿವಮೊಗ್ಗ	118
9.	ಚಿತ್ರದುರ್ಗ	17
10.	ದಾವಣಗೆರೆ	15
11.	ಮೈಸೂರು	86
12.	ಚಾಮರಾಜನಗರ	49
13.	ಮಂಡ್ಯ	81
14.	ಹಾಸನ	153
15.	ಚಿಕ್ಕಮಗಳೂರು	46
16.	ಕೊಡಗು	53
17.	ದಕ್ಷಿಣ ಕನ್ನಡ	118
18.	ಉಡುಪಿ	58

	ಜಿಲ್ಲೆಯ ಹೆಸರು	ಒಟ್ಟು ಹುದ್ದೆಗಳು
19.	ಬೆಳಗಾಂ	131
20.	ಬೆಳಗಾಂ ಉತ್ತರ	127
21.	ಬಿಜಾಪುರ	–
22.	ಬಾಗಲಕೋಟೆ	48
23.	ಧಾರವಾಡ	152
24.	ಗದಗ್	–
25.	ಹಾವೇರಿ	89
26.	ಉತ್ತರ ಕನ್ನಡ	187
27.	ಗುಲ್ಬರ್ಗಾ	61
28.	ಗುಲ್ಬರ್ಗಾ ಉತ್ತರ	09
29.	ಬಳ್ಳಾರಿ	66
30.	ರಾಯಚೂರು	33
31.	ಕೊಪ್ಪಳ	15
32.	ಬೀದರ್	65
	ಒಟ್ಟು	**2102**

2495(2690) ಶ್ರೀ ಕಳಕಪ್ಪ ಗುರುಶಾಂತಪ್ಪ ಬಂಡಿ (ಠೋಣ):–ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ರಾಜ್ಯಕ್ಕೆ ಮಂಜೂರಾದ ರಸ್ತೆಗಳ ವಿವರವನ್ನು ತಾಲ್ಲೂಕುವಾರು ವರ್ಷವಾರು ನೀಡುವುದು;

ಆ) ಇದಕ್ಕಾಗಿ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ, ಖರ್ಚಾದ ಹಣ ಎಷ್ಟು; ವರ್ಷವಾರು ವಿವರ ನೀಡುವುದು?

ಶ್ರೀ ಡಾ: ಹೆಚ್.ಸಿ. ಮಹದೇವಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ರಾಜ್ಯಕ್ಕೆ 1669 ಕಾಮಗಾರಿಗಳು ಮಂಜೂರಾಗಿವೆ. ತಾಲ್ಲೂಕುವಾರು/ ವರ್ಷವಾರು ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ.